




KEY PLAN



TOTAL SITE AREA - 19,323.47 SMT(4A-31G)

## LANDUSE ANALYSES

| LANDUSE | AREA IN SMT | PERCENTAGE |
|---|---|---|
| RESIDENTIAL | 10,378.25 | 53.70% |
| PARK & OPENSPACE | 2,951.84 | 15.28% |
| ROADS | 5,993.38 | 31.02% |
| TOTAL | 19,323.47 | 100.00% |

## SITE ANALYSES

| SITE DIMENSION | NOs. |
|---|---|
| 9.14 X 12.19 | 35 |
| 9.14 X 15.24 | 13 |
| 9.14 X 16.76 | 03 |
| ODD SITES * | 16 |
| EWS | 08 |
| TOTAL | 75 |

**BANGALORE DEVELOPMENT AUTHORITY**
**TOWN PLANNING SECTION**

T-Chowdaiah Road, Kumara park west, Bangalore-20.

**Residential Layout plan in Sy.No. 24/1(P),24/2(P),25/1(P),25/2(p), 26/1(P),26/2(P) &26/3(P) of Gattihalli Village, sarjapura Hobli, Anekal Taluk, Bangalore.**

N

**Scale- 1:700**

1) THE RESIDENTIAL LAYOUT PLAN IS APPROVED VIDE RESOLUTION NO :66/2017 DATED :07/06/2017

2) THE APPLICANT HAS REMITED RS.12,35,700/- VIDE CHALLAN NO.22880 DATED:30/06/2017

3) THE APPLICANT HAS TO ABIDE BY THE CONDITIONS IMPOSED IN THE WORK ORDER.

4) THE WORK ORDER ISSUED VIDE NO:BDA/TPM/PRL 33/2016-17/....1348.....DATED:...19/10/2017

| | | | | | | |
|---|---|---|---|---|---|---|
| 17/10/2017 | K.S. 17/10/17 | 17/10 | | 17/10 | 17/10/2017 | |
| TOWN PLANNER (BDA) | AEE (BDA) | DEPUTY DIRECTOR(EAST) (BDA) | JOINT DIRECTOR (MP) (BDA) | ADL DIRECTOR (BDA) | TOWN PLANNER MEMBER (BDA) | COMMISSIONER (BDA) |

OWNER'S SIGNATURE :-

H.P. RAMAREDDY

A. RAMAREDDY

KIRAN.V

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
Bangalore Development Authority

000202

ಸಂಖ್ಯೆ: ಬೆಂಅಪ್ರಾ/ನಯೋಸ/PRL-33/2016-17/ 1348 /2017-18.
No.

ದಿನಾಂಕ:
Date: 19/10/2017

# ಅಂತಿಮ ವಸತಿ ಬಡಾವಣೆ ನಕ್ಷೆ ಮತ್ತು ನಿವೇಶನಗಳ ಬಿಡುಗಡೆ ಆದೇಶ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17[2B]ರ ಅಡಿಯಲ್ಲಿ]

ವಿಷಯ: ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗಟ್ಟಿಹಳ್ಳಿ ಗ್ರಾಮದ ಸರ್ವೆ ನಂ.24/1 ರ ಪೈಕಿ 0-34.5 ಗುಂಟೆ, ಸ.ನಂ.24/2 ರ ಪೈಕಿ 0-13 ಗುಂಟೆ, ಸ.ನಂ.25/1 ರ ಪೈಕಿ 0-34 ಗುಂಟೆ, ಸ.ನಂ.25/2 ರ ಪೈಕಿ 0-14ಗುಂಟೆ, ಸ.ನಂ.26/1 ರ ಪೈಕಿ 0-33.5 ಗುಂಟೆ, ಸ.ನಂ.26/2 ರ ಪೈಕಿ 0-35 ಗುಂಟೆ, ಸ.ನಂ.26/3 ರ ಪೈಕಿ 0-27 ಗುಂಟೆ ಒಟ್ಟು 04 ಎಕರೆ 31 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಖಾಸಗಿ ವಸತಿ ಬಡಾವಣೆ ನಕ್ಷೆ ಅನುಮೋದಿಸುವಂತೆ ಜಮೀನಿನ ಮಾಲೀಕರಾದ ಶ್ರೀ ಹೆಚ್.ಪಿ. ರಾಮರೆಡ್ಡಿ, ಎ.ರಾಮರೆಡ್ಡಿ ಮತ್ತು ವಿ. ಕಿರಣ್ ಕೋರಿರುವ ಬಗ್ಗೆ.

ಉಲ್ಲೇಖ
1. ಅರ್ಜಿದಾರರ ಮನವಿ ದಿನಾಂಕ 06.10.2017.
2. ಬೆಂಗಳೂರು ಅಭಿವೃದ್ಧಿ ಪ್ರಾದಿಕಾರದ ನಗರ ಯೋಜನ ಸಮಿತಿ ಸಭೆಯ ಠರಾವು ಸಂಖ್ಯೆ 66/2017, ದಿನಾಂಕ 07.06.2017.
3. ಈ ಕಛೇರಿಯ ಕಾರ್ಯಾದೇಶದ ಸಂಖ್ಯೆ ಬೆಂಅಪ್ರಾ/ನಯೋಸ/PRL-33/2016-17/ 1012/2017-18, ದಿನಾಂಕ 17.08.2017.
4. ಅಭಿಯಂತರ ವಿಭಾಗದವರ ವರದಿ ದಿನಾಂಕ 13.10.2017.

ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗಟ್ಟಿಹಳ್ಳಿ ಗ್ರಾಮದ ಸರ್ವೆ ನಂ.24/1 ರ ಪೈಕಿ 0-34.5 ಗುಂಟೆ, ಸ.ನಂ.24/2 ರ ಪೈಕಿ 0-13 ಗುಂಟೆ, ಸ.ನಂ.25/1 ರ ಪೈಕಿ 0-34 ಗುಂಟೆ, ಸ.ನಂ.25/2 ರ ಪೈಕಿ 0-14ಗುಂಟೆ, ಸ.ನಂ.26/1 ರ ಪೈಕಿ 0-33.5 ಗುಂಟೆ, ಸ.ನಂ.26/2 ರ ಪೈಕಿ 0-35 ಗುಂಟೆ, ಸ.ನಂ.26/3 ರ ಪೈಕಿ 0-27 ಗುಂಟೆ ಒಟ್ಟು 04 ಎಕರೆ 31 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಖಾಸಗಿ ವಸತಿ ಬಡಾವಣೆಗೆ ಅಂತಿಮ ಅನುಮೋದನೆ ಮತ್ತು ಶೇ. 100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಜಮೀನಿನ ಮಾಲೀಕರಾದ ಶ್ರೀ ಹೆಚ್.ಪಿ. ರಾಮರೆಡ್ಡಿ, ಎ.ರಾಮರೆಡ್ಡಿ ಮತ್ತು ವಿ. ಕಿರಣ್ ರವರು ಉಲ್ಲೇಖ [1] ರಲ್ಲಿ ಕೋರಿರುತ್ತಾರೆ.

2...

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು - 560 020.
T. Chowdaiah Road, Kumarapark West, Bangalore-560 020, Facsimile: 2334 5799, Website: www.bdabangalore.org

ಪರಿಶೀಲಿಸಲಾಗಿ, ಉಲ್ಲೇಖ [2] ರ ಪ್ರಾಧಿಕಾರದ ನಗರ ಯೋಜನಾ ಸಮಿತಿ ಸಭೆಯ ಠರಾವು ಸಂಖ್ಯೆ 66/2017, ದಿನಾಂಕ 07.06.2017 ರಲ್ಲಿ ಮಂಡಿಸಿ ಚರ್ಚಿಸಲಾಯಿತು. ಚರ್ಚೆಯ ನಂತರ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗಟ್ಟಿಹಳ್ಳಿ ಗ್ರಾಮದ ಸರ್ವೆ ನಂ.24/1 ರ ಪೈಕಿ 0-34.5 ಗುಂಟೆ, ಸ.ನಂ.24/2 ರ ಪೈಕಿ 0-13 ಗುಂಟೆ, ಸ.ನಂ.25/1 ರ ಪೈಕಿ 0-34 ಗುಂಟೆ, ಸ.ನಂ.25/2 ರ ಪೈಕಿ 0-14ಗುಂಟೆ, ಸ.ನಂ.26/1 ರ ಪೈಕಿ 0-33.5 ಗುಂಟೆ, ಸ.ನಂ.26/2 ರ ಪೈಕಿ 0-35 ಗುಂಟೆ, ಸ.ನಂ.26/3 ರ ಪೈಕಿ 0-27 ಗುಂಟೆ ಒಟ್ಟು 04 ಎಕರೆ 31 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಖಾಸಗಿ ವಸತಿ ಬಡಾವಣೆ ನಕ್ಷೆ ಅನುಮೋದನೆ ಸಂಬಂಧ ಕೆಲವೊಂದು ಸಾಮಾನ್ಯ ಷರತ್ತುಗಳಿಗೊಳಪಡಿಸಿ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಸಭೆಯ ತೀರ್ಮಾನದಂತೆ ಅರ್ಜಿದಾರರಿಂದ ಅಗತ್ಯ ಶುಲ್ಕಗಳನ್ನು ಪಾವತಿಸಿಕೊಂಡು ಬಡಾವಣೆಯಲ್ಲಿನ ಉದ್ಯಾನವನ / ಬಯಲುಜಾಗಗಳು ಮತ್ತು ರಸ್ತೆ ಪ್ರದೇಶಗಳನ್ನು ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ನೋಂದಾಯಿತ ಪರಿತ್ಯಜನಾ ಪತ್ರದ ಮುಖಾಂತರ ದಿನಾಂಕ 14.07.2017 ರಂದು ಹಸ್ತಾಂತರ ಮಾಡಿದ ನಂತರ ಕೆಲವೊಂದು ಷರತ್ತುಗಳಿಗೊಳಪಡಿಸಿ, ತಾತ್ಕಾಲಿಕ ವಿನ್ಯಾಸ ನಕ್ಷೆಯನ್ನು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ (ರಸ್ತೆ, ಒಳಚರಂಡಿ ಮತ್ತು ನೀರು ಸರಬರಾಜು, ವಿದ್ಯುದ್ದೀಕರಣ, ಉದ್ಯಾನವನ ಅಭಿವೃದ್ಧಿ ಮತ್ತು ಇತರೆ) ಸಂಬಂಧ ಕೆ.ಟಿ.ಸಿ.ಪಿ ಕಾಯ್ದೆ 1961 ರ ಕಲಂ 17 (2A) ರ ಅನ್ವಯ ಉಲ್ಲೇಖ (3) ರಲ್ಲಿ ಬಿಡುಗಡೆ ಮಾಡಲಾಗಿತ್ತು.

ಉಲ್ಲೇಖ (4) ರಲ್ಲಿ ಕಾರ್ಯಪಾಲಕ ಅಭಿಯಂತರರು / ಅಭಿಯಂತರ ಅಧಿಕಾರಿ-1 ರವರು ಸ್ಥಳವನ್ನು ಪರಿಶೀಲಿಸಿ, ಅನುಮೋದಿತ ವಸತಿ ಬಡಾವಣೆ ನಕ್ಷೆಯಂತೆ ಒಟ್ಟಾರೆ 75 ನಿವೇಶನಗಳನ್ನು ರಚಿಸಲಾಗಿದೆ. ಪ್ರತಿ ನಿವೇಶನಕ್ಕೂ ಕುಡಿಯುವ ನೀರು, ಚರಂಡಿ ವ್ಯವಸ್ಥೆ ಕಲ್ಪಿಸಿದ್ದು, ಮಳೆ ನೀರು ಸಂರಕ್ಷಣೆಗಾಗಿ ವ್ಯವಸ್ಥೆ ಕಲ್ಪಿಸಿದ್ದು, ಬಡಾವಣೆ ನಕ್ಷೆಯಲ್ಲಿ ಗುರುತಿಸಿದೆ. ಬಡಾವಣೆ ನಕ್ಷೆಯಂತೆ ಸಿವಿಲ್ ಕಾಮಗಾರಿಗಳನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ವಿಭಾಗದವರ ಮೇಲ್ವಿಚಾರಣೆಯಲ್ಲಿ ಕಾರ್ಯಗಳ ಲಮಾಡಿರುತ್ತಾರೆ. ಬಡಾವಣೆಯಲ್ಲಿ ಪೂರ್ಣವಾಗಿ ಅಭಿವೃದ್ಧಿಗೊಳಿಸಲಾಗಿದೆ ಎಂದು ಹಾಗೂ ಬಡಾವಣೆಯಲ್ಲಿನ ರಸ್ತೆ, ಮಳೆನೀರಿನ ಚರಂಡಿ, ಒಳಚರಂಡಿ ಮತ್ತು ನೀರು ಸರಬರಾಜು ವ್ಯವಸ್ಥೆ, ವಿದ್ಯುದ್ದೀಕರಣ ಬಗ್ಗೆ ಸಂಬಂಧಪಟ್ಟ ಇಲಾಖೆಯು ನೀಡಿದ ನಿರಾಕ್ಷೇಪಣಾ ಪತ್ರ ಹಾಗೂ ಉದ್ಯಾನವನ ಅಭಿವೃದ್ಧಿಯ ಕಾಮಗಾರಿಗಳನ್ನು ಅನುಮೋದಿತ ನಕ್ಷೆಯಂತೆ Chain link fencing ಹಾಕಿ ಪೂರ್ಣಗೊಳಿಸಿರುವುದಾಗಿ ತಿಳಿಸಿ ಬಡಾವಣೆಯ ಛಾಯಾಚಿತ್ರಗಳನ್ನು ನೀಡಿರುತ್ತಾರೆ. ಉಲ್ಲೇಖ (3) ರ ಕಾರ್ಯಾದೇಶದಲ್ಲಿನ ಷರತ್ತುಗಳನ್ನು ಪೂರೈಸಿರುವುದಾಗಿ ಪ್ರಾಧಿಕಾರದ ಕಾರ್ಯಪಾಲಕ ಅಭಿಯಂತರರು ಮತ್ತು ಅಭಿಯಂತರ ಅಧಿಕಾರಿ-3 ರವರು ಸ್ಥಳ ಪರಿಶೀಲನಾ ವರದಿಯೊಂದಿಗೆ ಬಡಾವಣೆಗೆ ಅಂತಿಮ ಅನುಮೋದನೆ ನೀಡಲು ಮತ್ತು ಶೇ.100 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

000201

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಆದೇಶದ ಸಂಖ್ಯೆ:ಬೆಂಅಪ್ರಾ/ನಯೋಸ/PRL- 33/2016-17/ 1348 /17-18.**

**ದಿನಾಂಕ 19/10/2017**

ಮೇಲ್ಕಂಡ ಪ್ರಸ್ತಾವನೆಯಲ್ಲಿನ ಅಂಶಗಳ ಹಿನ್ನಲೆಯಲ್ಲಿ ಅರ್ಜಿದಾರರು ತಾತ್ಕಾಲಿಕ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿರುವ ಬಗ್ಗೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಭಿಯಂತರ ಶಾಖೆಯವರು ವರದಿ ನೀಡಿರುವುದರಿಂದ ಮತ್ತು ಸಕ್ಷಮ ಪ್ರಾಧಿಕಾರಗಳಿಂದ ದೃಢೀಕೃತ ಪತ್ರಗಳನ್ನು ಪಡೆದು ಸಲ್ಲಿಸಿರುವುದರಿಂದ ಹಾಗೂ ತಾತ್ಕಾಲಿಕ ವಿನ್ಯಾಸದಲ್ಲಿ ಯಾವುದೇ ಬದಲಾವಣೆಗಳು ಇಲ್ಲದೇ ಇರುವುದರಿಂದ ಬೆಂಗಳೂರು ಜಿಲ್ಲೆ, ಆನೇಕಲ್ ತಾಲ್ಲೂಕು, ಸರ್ಜಾಪುರ ಹೋಬಳಿ, ಗಟ್ಟಿಹಳ್ಳಿ ಗ್ರಾಮದ ಸರ್ವೆ ನಂ.24/1 ರ ಪೈಕಿ 0-34.5 ಗುಂಟೆ, ಸ.ನಂ.24/2 ರ ಪೈಕಿ 0-13 ಗುಂಟೆ, ಸ.ನಂ.25/1 ರ ಪೈಕಿ 0-34 ಗುಂಟೆ, ಸ.ನಂ.25/2 ರ ಪೈಕಿ 0-14ಗುಂಟೆ, ಸ.ನಂ.26/1 ರ ಪೈಕಿ 0-33.5 ಗುಂಟೆ, ಸ.ನಂ.26/2 ರ ಪೈಕಿ 0-35 ಗುಂಟೆ, ಸ.ನಂ.26/3 ರ ಪೈಕಿ 0-27 ಗುಂಟೆ ಒಟ್ಟು 04 ಎಕರೆ 31 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ಖಾಸಗಿ ವಸತಿ ಬಡಾವಣೆ ನಕ್ಷೆಗೆ ಅಂತಿಮ ಅನುಮೋದನೆ ನೀಡಿರುತ್ತದೆ ಮತ್ತು ಬಡಾವಣೆಯಲ್ಲಿ ವಿವಿಧ ಅಳತೆಯ ಒಟ್ಟು 75 ನಿವೇಶನಗಳು ಇದ್ದು, ಎಲ್ಲಾ ನಿವೇಶನಗಳ ಖಚಿತ ಅಳತೆ ವರದಿಯನ್ನು ಅಭಿಯಂತರ ವಿಭಾಗದಿಂದ ಪಡೆಯುವ ಮತ್ತು ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ. ಅಂತಿಮ ಅನುಮೋದನೆ ನೀಡಿರುವ ವಿನ್ಯಾಸದ ನೀಲಿ ನಕ್ಷೆಯನ್ನು (ಅಭಿವೃದ್ಧಿಪಡಿಸಿದ) ಪ್ರಾಧಿಕಾರದ ಮುದ್ರೆಯೊಂದಿಗೆ ಆದೇಶದೊಂದಿಗೆ ಅಡಕಗೊಳಿಸಲಾಗಿದೆ.

1. ಅಂತಿಮ ಅನುಮೋದನೆಯಾದ ವಿನ್ಯಾಸದಲ್ಲಿ ಪ್ರಾಧಿಕಾರದ ಪೂರ್ವಾನುಮತಿ ಇಲ್ಲದೇ ಯಾವುದೇ ಬದಲಾವಣೆಗಳನ್ನು ಮಾಡತಕ್ಕದ್ದಲ್ಲ. ಹಾಗೂ ಬಡಾವಣೆಯಲ್ಲಿನ ಬೋರ್ ವೆಲ್ ಅನ್ನು ಪ್ರಾಧಿಕಾರದ ಅಭಿಯಂತರ ವಿಭಾಗಕ್ಕೆ ಹಸ್ತಾಂತರಿಸತಕ್ಕದ್ದು.
2. ಸಲ್ಲಿಸಿರುವ ಪ್ರಮಾಣ ಪತ್ರದಂತೆ ಬಡಾವಣೆಯನ್ನು ಸ್ಥಳೀಯ ಸಂಸ್ಥೆಗೆ ಹಸ್ತಾಂತರಿಸುವವರೆಗೆ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆಯನ್ನು ನಿರ್ವಹಣೆ ಮಾಡತಕ್ಕದ್ದು.
3. ಬಡಾವಣೆ ನಕ್ಷೆ ಅನುಮೋದನೆ ಸಂಬಂಧ ನೀವು ಸಲ್ಲಿಸಿರುವ ದಾಖಲೆಗಳ ಆಧಾರದ ಮೇಲೆ ಅನುಮೋದನೆ ನೀಡಿರುವುದರಿಂದ ಮುಂದಿನ ದಿನಗಳಲ್ಲಿ ಸದರಿ ಜಮೀನುಗಳ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ತಂಟೆ ತಕರಾರು ಅಥವಾ ಸಿವಿಲ್ ವ್ಯಾಜ್ಯಗಳು ಉದ್ಭವವಾದಲ್ಲಿ ಬಡಾವಣೆ ಮಾಲೀಕರೇ ಹೊಣೆಗಾರರಾಗಿರುತ್ತಾರೆ, ಪ್ರಾಧಿಕಾರವು ಜವಾಬ್ದಾರಿಯಲ್ಲ.
4. ಸಲ್ಲಿಸಿರುವ ದಾಖಲೆಗಳು / ಮಾಹಿತಿಗಳು ಸುಳ್ಳೆಂದು ದೃಢಪಟ್ಟಲ್ಲಿ ವಿನ್ಯಾಸ ಅನುಮೋದನೆಯನ್ನು ಯಾವುದೇ ಸೂಚನೆ ಇಲ್ಲದೇ ರದ್ದುಗೊಳಿಸುವ ಅಧಿಕಾರವನ್ನು ಪ್ರಾಧಿಕಾರವು ಹೊಂದಿರುತ್ತದೆ.
5. ಇತರೇ ಇಲಾಖೆ / ಸಂಸ್ಥೆಗಳಿಂದ ನೀಡಿರುವ ದೃಢೀಕರಣ ಪತ್ರಗಳಲ್ಲಿನ ಷರತ್ತುಗಳನ್ನು ಹಾಗೂ ದಿನಾಂಕ 17.08.2017 ರ ಕಾರ್ಯಾದೇಶದಲ್ಲಿ ಅನ್ವಯವಾಗುವ ಇತರೆ ಷರತ್ತುಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು. ಹಾಗೂ ಈ ಸಂಬಂಧ ದಿನಾಂಕ 23.06.2017 ರಂದು ನೀಡಿರುವ ಮುಚ್ಚಳಿಕೆ ಪತ್ರಕ್ಕೆ ಬದ್ಧರಿರತಕ್ಕದ್ದು.
6. ವಿನ್ಯಾಸದಲ್ಲಿ ಆರ್ಥಿಕ ದುರ್ಬಲ ವರ್ಗದವರಿಗಾಗಿ (EWS) ಕಾಯ್ದಿರಿಸಿದ ನಿವೇಶನಗಳನ್ನು ಸಮಾಮೇಲನ ಮಾಡಲು ಅವಕಾಶ ಇರುವುದಿಲ್ಲ.

7. ವಿನ್ಯಾಸದಲ್ಲಿನ ರಸ್ತೆ, ಉದ್ಯಾನವನ, ಬಫರ್ ಖರಾಬು ಹಾಗೂ ಇತರೆ ಸಾರ್ವಜನಿಕ ಉಪಯೋಗದ ಜಾಗಗಳು ಯಾವುದೇ ರೀತಿಯ ಒತ್ತುವರಿಯಾಗದಂತೆ ಮುಂಜಾಗ್ರತೆ ಕ್ರಮವಹಿಸತಕ್ಕದ್ದು.
8. ಬಡಾವಣೆ ನಕ್ಷೆಯಲ್ಲಿ ಕನಿಷ್ಠ 30% ಕಟ್ಟಡ ಬರುವವರೆಗೆ ಬಡಾವಣೆಯನ್ನು ಸುಸ್ಥಿತಿಯಲ್ಲಿ, ಇಡುವ ಬಗ್ಗೆ ಅಭಿವೃದ್ಧಿದಾರರು ಸಲ್ಲಿಸಿರುವ ಮುಚ್ಚಳಿಕೆ ಪತ್ರಕ್ಕೆ ಬದ್ಧರಿರತಕ್ಕದ್ದು.
9. ದಿನಾಂಕ 08.11.2016 ರಂದು ಪ್ರಾಧಿಕಾರಕ್ಕೆ ಮೆಟ್ರೋ ಸೆಸ್ ಮತ್ತು ಇತರ ಸೆಸ್ ಗಳಿಗೆ ಸಂಬಂಧಿಸಿದಂತೆ ಮತ್ತು ಅಂತಿಮ ಅನುಮೋದನೆ ಪಡೆಯುವ ಸಂದರ್ಭದಲ್ಲಿ ಸಲ್ಲಿಸಿರುವ ಪ್ರಮಾಣ ಪತ್ರದಲ್ಲಿನ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

ಆಯುಕ್ತರು
ಬೆಂಅಪ್ರಾ, ಬೆಂಗಳೂರು

ಇವರಿಗೆ,

ಶ್ರೀ ಎ. ರಾಮರೆಡ್ಡಿ, ಶ್ರೀ ಹೆಚ್.ಪಿ. ರಾಮರೆಡ್ಡಿ ಮತ್ತು ಶ್ರೀ ಕಿರಣ್ .
# 479, 13 ನೇ ಕ್ರಾಸ್,
ಕೋರಮಂಗಲ 3 ನೇ ಹಂತ,
ಬೆಂಗಳೂರು.